ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 16, ಸ್ಯ 1887.

☞ ಈ ಭಾಗವನ್ನು ಪ್ರತ್ಯೇಕ ಜೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಿರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾರ್ಷಿಯಲ್ ಇಲಾಖಾ.

1882ನೇ ಇಸವ್ವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜೂ ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 8ನೇ ಜುಲೈ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ತುಮಕೂರು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಜೇವಾರಸ್ ಆಗಿಯಿರತಕ್ಕ ಈ ಕೆಳಗೆ ವಿವರಿಸೋಣವಾಗಿರುವ ದಸ್ತೈವಜನ್ನ ಹಾಜರ್ಮಾಡಿದವರೆ ಆಗಲಿ ಆಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕು ದಾರ್ರೇಯಾಗಲಿ ಈ ನೋಟೀಸು ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ತುಮಕೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲು. ತಪ್ಪಿದರೆ, 1877ನೇ ಇಸವಿ 3ನೇ ನಂಬರು ಇಂಡಿಯ್ಯ ರಿಜಿಸ್ಟ್ರೇಷ್ಯನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು.

ದಸ್ತೈವಜಿನ ನಂಬರ್.	ದಸ್ತೈವಜನ್ನು ಹಾಜರು ಮಾಡಿದ ತಾರೀಖು.	ದಸ್ತೈವಜನ್ನು ರಿಜಿಸ್ಟರ್ ಮಾಡಬೇಕೆಂದು ಹುಕುಮಾದ ತಾರೀಖು.	ದಸ್ತೈವಜನ್ನು ರಿಜಿಸ್ಟರ್ ಮಾಡಿದ ತಾರೀಖು.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
104 1885—86	20—3—1885	4—7—1885	4—7—1885	ಕುಣಿಗಲ್‌ನಲ್ಲಿರುವ ಸಿದ್ದಪ್ಪನವರ ಮಗ ಗಂಗಯ್ಯ	ತುಮಕೂರು ತಾಲ್ಲೂಕು ಹೆಬ್ಬೂರು ಈಸಬಾಗ್ರಾಮದಲ್ಲಿ ಯಿರುವ ಪುಟ್ಟಣ್ಣನ ಮಗ ರಂಗಪ್ಪನಿಗೆ	ಹೆಬ್ಬೂರು ಬಳಿ ಸರ್ವೆ ನಂಬರು 123 ಯಲ್ಲಿ ಕರೆ 3—37 ಆಕಾರ 4—12—0 ವುಳ್ಳ ಹಿಪ್ಪೆಮರದ ತೋಪನ್ನು 95—0—0 ರೂ ಪಾಯಿಗೆ ಅನ್ಯಾದಿ ಮಾಡಿರುವದಾಗಿಯೂ ಮೂಲ ಕರ್ತನಿಂದ ವೊಬಳಗು ಪಾವತಿ ಆಗುವವರಿಗೂ ಸ್ಥಿತಿ ಅನುಭವಿಸಿಕೊಂಡು ಬರುವದೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 284.

ಮೃತಪಟ್ಟ ಶ್ಯಾಮಶಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1 ಕೃಷ್ಣಾಬಾಯಿ 2 ಲಕ್ಷ್ಮಾಬಾಯಿ, ಮೃತಪಟ್ಟ ಸದರೀ ಶ್ಯಾಮಶಿಂಗರಿಗೆ 1ನೇ ಹೆಂಡತಿ 2ನೇ ಸೊಸೆ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಕೃಷ್ಣಾಬಾಯಿ ಲಕ್ಷ್ಮಾಬಾಯಿರು ಸದರೀ ವಾಸಸ್ಥರಾಗಿ ಮೃತಪಟ್ಟ ಶ್ಯಾಮಶಿಂಗರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಕೃಷ್ಣಾಬಾಯಿ 2ನೇ ಲಕ್ಷ್ಮಾಬಾಯಿ ಅರ್ಜೀಯನ್ನ 1887ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ನಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ಯಾಮಶಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 285.

ಮೃತಪಟ್ಟ ಬೆಟ್ಟನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ದಾಸನು ಮೃತಪಟ್ಟ ಸದರೀ ಬೆಟ್ಟನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ದೊಡ್ಡೇಗೌಡನ ಕೊಪ್ಪಲು ಸ್ಥಳದ ಸದರೀ ದಾಸನು ಸದರೀ ವಾಸಸ್ಥರಾಗಿ ಮೃತಪಟ್ಟ ಬೆಟ್ಟನ ಜಿಂದಗಿ ಬಗ್ಯಾಗಿ ಬರತಕ್ಕ 50 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ದಾಸನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ನಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಟ್ಟನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜುಲೈ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ವೊಹರ್‌ಸಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.